ನಷ್ಟವಾಯಿತೋ ನಮ್ಮ ಕೇರಿಯ ನಾವೊಂದಿಷ್ಟು ಮಕ್ಕಳಿಗಂತೂ ಒಂದಷ್ಟು ಬಣ್ಣಬಣ್ಣದ ಕೋಳಿಪುಚ್ಛಗಳು ಸಿಕ್ಕಿ ಆಡಿಕೊಳ್ಳಲು ನೆರವಾಯಿತು. ಅವನ್ನು ರೆಕ್ಕೆ ಉದುರಿದ ಶೆಟಲ್ ಕಾಕಿಗೂ ಸಿಕ್ಕಿಸಿಕೊಂಡು ಆಡಿದೆವು. ಕೆಲವೊಂದಿಷ್ಟು ಸಂಗ್ರಹಕ್ಕೂ ಸೇರಿದವು. ಇನ್ನೊಂದಷ್ಟು ಹಂಗೂ ಹಿಂಗೂ ನಮ್ಮ ಕೈಯ್ಯಲ್ಲಿ ಅಪ್ಪಚ್ಚಿಯಾದವು.

ಶೆಟಲ್ ಕಾಕ್ ಎಂದರೆ ಸಾಕು ನನಗೆ ಅದೊಂದು ಘಟನೆ ನೆನಪಾಗಿ ನಗು ಬರುತ್ತದೆ. ನನ್ನ ಪ್ರಾಥಮಿಕ ಶಾಲೆಯ ಗೆಳತಿ ವನಿತಾಳ ಮನೆಯಲ್ಲಿ ಅವರು ಶುದ್ಧ ಶಾಖಾಹಾರಿಗಳಾದ್ದರಿಂದ ಮಾಂಸವೆಂದರೆ ಹಾವು ತುಳಿದವರಂತೆ ಆಡುತ್ತಿದ್ದರು. ಇವಳೂ ಸಹ ಸ್ವಲ್ಪ ಹಂಗಂಗೇ... ಅವಳ ಮನೆಯಲ್ಲಿ ಅದೇನೇನು ಹೇಳಿ ಅವಳ ತಲೆಗೆ ತುಂಬಿರುತ್ತಿದ್ದರೋ ಏನೋ... ಶೆಟಲ್ ಕಾಕ್ ಎಂದರೆ ಸಾಕು ಮಾರು ದೂರ ಹಾರುತ್ತಿದ್ದಳು. ಇದು ಕೋಳಿಯದೋ ಪಾರಿವಾಳದ್ದೋ ರೆಕ್ಕೆಯಿಂದ ಮಾಡಿರುತ್ತಾರಂತೆ (ನನಗೀಗಲೂ ಅದು ಯಾವ ರೆಕ್ಕೆಗಳಿಂದ ಮಾಡಿರುತ್ತಾರೆಂದು ಕೋಳಿಪುಚ್ಛದಾಣೆ ಗೊತ್ತಿಲ್ಲ), ಅದರಲ್ಲೂ ಅವುಗಳನ್ನು ಚಿತ್ರಹಿಂಸೆ ಕೊಟ್ಟು ಕೊಂದು ಅವುಗಳ ಒಂದೊಂದೇ ರೆಕ್ಕೆಗಳನ್ನು ಕಿತ್ತು, ತೆಗೆದು, ತೊಳೆದು ಆಮೇಲೆ ಇಂತಹ ಕಾಕ್‌ಗಳನ್ನು ತಯಾರಿಸಿರುತ್ತಾರಂತೆ ಎನ್ನುವುದು ಅವಳ ತಪ್ಪು ತಿಳಿವಳಿಕೆ. ನಾವಂತೂ 'ನೀ ಕಾಕು ಮುಟ್ಟದ್ದು ಒಂದು ನಮೂನಿ ಒಳ್ಳೇದೇ ಆತು ತಗಾ ಮಾರಾಯ್ತಿ... ನಿನಗೆ ಕೊಡೋ ಚಾನ್ಸೂ ನಾವೇ ಹೊಡ್ಕತೀವಿ...' ಅಂತೇಳಿ ಅವಳ ಹೊಟ್ಟೆ ಉರಿಸುತ್ತಾ ಆಡುತ್ತಿದ್ದೆವು. ಅವಳು ಕಾಕನ್ನು ಮುಟ್ಟಲಾರದೆ, ಮುಟ್ಟದಿರಲಾದೆ ಒದ್ದಾಡುವುದನ್ನು ನಾವೆಲ್ಲಾ ಊರಗಲ ಬಾಯಿಕಳೆದು ನೋಡುತ್ತಾ ಎಂಜಾಯ್ ಮಾಡುತ್ತಿದ್ದೆವು.

ಪುಚ್ಛವೆನ್ನುವ ಪುಚ್ಛದಂತಹ ತೃಣ ಮಾತ್ರದ, ಮನುಷ್ಯನ ವ್ಯಾವಹಾರಿಕ ದೃಷ್ಟಿಯಲ್ಲಿ ಯಾವ ಬೆಲೆಯನ್ನೂ ಹೊಂದಿಲ್ಲದ ವಸ್ತುವೊಂದು ಹೀಗೆಲ್ಲಾ ನನ್ನನ್ನು ಕಾಡುವಾಗ... ಅದೆಷ್ಟೋ ಬಾರಿ ಅನಿಸುತ್ತದೆ... ನಮ್ಮ ನಾಣ್ಯ, ನೋಟುಗಳನ್ನು ಮೀರಿದ್ದೊಂದು ಜಗತ್ತಿನಲ್ಲಿದೆ... ಮತ್ತದು ಸದಾ ಬದುಕಿನ ನಿಜ ಅರ್ಥವನ್ನು ಕಾಣಿಸಲಿಕ್ಕೆ ತುಡಿಯುತ್ತಿರುತ್ತದೆ ಎಂದು. ಕಣ್ಣಿನ ಮೇಲೊಂದು ದಪ್ಪನೆ ಚಾಳೀಸು ತೊಟ್ಟು ಜಾಣ ಕುರುಡು ಪ್ರದರ್ಶಿಸುವ, ಮತ್ತದನ್ನೇ ನಿಜವಾದ ಜಾಣತನ ಎಂದು ಬಲವಾಗಿ ನಂಬಿರುವ ನಮಗೆ ಅರ್ಥವಾಗುವುದು ಅಷ್ಟು ಸುಲಭವಲ್ಲ. ಅಂದು ಕೆಲಸಕ್ಕೆ ಹೊರಟು ಮನೆಯ ಬೀಗಹಾಕುತ್ತಿದ್ದೆ. ಬೆಳ್ಳಂಬಿಳಿ ಪುಟ್ಟಪುಟ್ಟ ಮಂಜಿನಿಂದ ಮಾಡಿದಂತಹ ಗರಿಗಳು ಅಂಗಳದಲ್ಲಿ ತೇಲುತ್ತಿದ್ದವು. ಅವುಗಳನ್ನು ಹೆಕ್ಕಿಟ್ಟುಕೊಳ್ಳಬೇಕೆಂದು ಮನಸಲ್ಲೇ ಅಂದುಕೊಳ್ಳುತ್ತ ಬೀಗ ಹಾಕಿ ಮುಗಿಸುವ ಹೊತ್ತಿಗೆ 'ಬೇಗ ಬಾ, ತಡ ಆಯ್ತು...' ಎನ್ನುವ ಗಂಡನ ಆಣತಿ ಕೇಳಿ ಎಲ್ಲವನ್ನೂ ಕ್ಷಣಾರ್ಧದಲ್ಲಿ ಮರೆತು ಬೈಕ್ ಹತ್ತಿ ಹೊರಟುಬಿಟ್ಟಿದ್ದೆ. ಅರ್ಧ ದಾರಿಗೆ ಹೋದ ಮೇಲೆ ಗರಿಗಳು ನೆನಪಾಗಿದ್ದವು. ಕೆಲಸಕ್ಕೆ ತಡವಾಗುತ್ತದೆನ್ನುವ ಕಾರಣಕ್ಕೆ ಮತ್ತೆ ಮನೆಕಡೆ ಹೆಜ್ಜೆ ಹಾಕಬೇಕೆನ್ನುವ ತುಡಿತವನ್ನು ಹತ್ತಿಕ್ಕಿಕೊಂಡೆ. ಧಾವಂತಕ್ಕೆ ಕಟ್ಟು ಬಿದ್ದ ಬದುಕಲ್ಲಿ ಬದುಕಿಗೆ ಅಗತ್ಯವಿರುವ ತಿನಿಸನ್ನು ಆರಲು ಬಿಟ್ಟು ಶುಷ್ಕವಾಗುತ್ತಾ ನಡೆದುಬಿಡುತ್ತೇವೆ. ಬಿರಿದ ಚರ್ಮದಿಂದ ರಕ್ತ ಸೋರುವುದನ್ನು ನೋಡುತ್ತಾ ಪರಿತಪಿಸುತ್ತೇವೆ. ಆದರೆ ಅದರಿಂದ ಏನನ್ನೂ ಕಲಿಯಬೇಕೆನಿಸುವುದಿಲ್ಲ. ಯಾಕೆ ಹೀಗೆ ನಾವು?!... ಎಂದೆಲ್ಲಾ ಯೋಚಿಸುತ್ತಾ ಅದರಲ್ಲೇ ತೃಪ್ತಿ ಸಮಾಧಾನವನ್ನೂ ಹೊಂದುತ್ತೇವೆ.

ಮತ್ತೊಂದು ಬಾರಿ ಹೀಗೇ... ಮೈದಾನದಲ್ಲಿ ನಡೆಯುತ್ತಿದ್ದೆ. ಮರಕುಟಿಕದ ಗರಿಯೊಂದು ಇನ್ನೇನು ನನ್ನ ಚಪ್ಪಲಿ ಕಾಲ್ಗಳಲ್ಲಿ ತುಳಿಸಿಕೊಳ್ಳುವುದರಿಂದ ತಪ್ಪಿಸಿಕೊಂಡಿತ್ತು. ನಾನದನ್ನು